183(129) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್.

ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ಗೋ ಸಂರಕ್ಷಣೆ ಹಾಗೂ ದೇಶೀ ತಳಿಗಳ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಮಾಡಲಾಗಿದೆ? ಹಾಗೂ ಇದಕ್ಕೆ ವಿನಿಯೋಗಿಸಲಾದ ಹಣವೆಷ್ಟು? ವಿವರ ನೀಡುವುದು?

ಶ್ರೀ ರೇವೂನಾಯಕ ಬೆಳಮಗಿ

ಅ) ಕೋಲಾರ ಜಿಲ್ಲೆಗೆ 2006–07 ನೇ ಸಾಲಿನಲ್ಲಿ ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕೆಮದಡಿಯಲ್ಲಿ ಒಟ್ಟು 10.00ಲಕ್ಷಗಳ ಸಹಾಯಾನುಧನವಾಗಿ, ಸಕಾರೇತರ ಸಂಸ್ಥೆಗಳು, ಸೇವಾ ಸಂಸ್ಥೆಗಳು ಹಾಗೂ ದತ್ತಿ ಸಂಸ್ಥೆಗಳಿಗೆ ದೇಶೀ ತಳಿ ಅಭಿವೃದ್ಧಿ ಮತ್ತು ಸಂರಕ್ಷಣೆ ಉದ್ದೇಶಕ್ಕಾಗಿ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಾಗಿ ಬಿಡುಗಡೆ ಮಾಡಲು ಒದಗಿಸ ಲಾಗಿತ್ತು.

ಆ) ಕೋಲಾರ ಜಿಲ್ಲೆಯಲ್ಲಿ ಈ ಯೋಜನೆ ಅನುಷ್ಠಾನ ಗೊಳಿಸಲಾಗಿಲ್ಲ. ಜಿಲ್ಲೆಯಲ್ಲಿ 20 ಎಕರೆ ಜಮೀನು ಹೊಮದಿ 100 ಸ್ಥಳೀಯ ರಾಸುಗಳನ್ನು ಹೊಂದಿ ದೇಶೀ ತಳಿ ಅಭಿವೃದ್ಧೀ ಮತ್ತು ಸಂರಕ್ಷಣೆ ಯಲ್ಲಿ ತೊಡಗಿಸಿಕೊಂಡಿರುವ ಅರ್ಹರಾದ ಯಾವುದೇ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ದತ್ತಿ ಸಂಸ್ತೆಗಳು ಲಭ್ಯವಾಗದ ಕಾರಣ ಅನುಷ್ಠಾನ ಗೊಳಿಸಲಾಗಿಲ್ಲ. ಆದ್ದರಿಂದ ಯಾವುದೇ ಅನುದಾನ ವಿನಿಯೋಗಿಸಲಾಗಿಲ್ಲ.